# ದೈವಾಯತ್ತ

ನಮ್ಮಲ್ಲಿ ದೈವಕ್ಕೆ ಅಧೀನರಾದವರು ಇದ್ದಂತೆ; ದೈವದ ಆಚೆಗೆ ನಿಂತು ಬದುಕನ್ನು ನೋಡಿದವರೂ ಇದ್ದಾರೆ. ದೈವದ ಸಾಂಗತ್ಯ ಮನುಷ್ಯನಿಗೆ ಬೇಕೆಂದು ಕೆಲವರೂ ಅದರ ಗೊಡವೆಯೇ ಬೇಡವೆಂದು ಮತ್ತೆ ಕೆಲವರೂ ನಿಶ್ಚಯಮಾಡಿಕೊಂಡಿದ್ದುಂಟು. ಅಂದರೆ ದೈವಬಲ ಮತ್ತು ಮಾನುಷಬಲ ಸಮಾಜಪುರುಷನ ಎರಡು ಪ್ರತೀಕಗಳೆಂದು ತಿಳಿಯಬಹುದು. ಆದರೆ, ಪಶ್ಚಿಮವು ಪುರುಷ ಪ್ರಯತ್ನದ ಕಡೆ ಹೆಚ್ಚು ಒತ್ತು ನೀಡಿದ್ದರೆ; ಪೂರ್ವದ ಒಲವು ದೈವಪ್ರಯತ್ನದ ಕಡೆಗೆ ಹೆಚ್ಚಾಗಿರುವುದನ್ನು ಸಂಸ್ಕೃತಿ–ಸಮಾಜದ ನೋಟದಿಂದ ತಿಳಿಯಲು ಸಾಧ್ಯವಾಗುತ್ತದೆ. ಸಮಾಜ, ಭಾಷೆ, ನಡಾವಳಿ–ನುಡಿವಳಿ, ಮತೀಯ ನಂಬಿಕೆ, ಕಥಾವಳಿ, ಸಾಹಿತ್ಯ ಹೀಗೆ ಭಾರತೀಯ ಸಂಸ್ಕೃತಿಯ ಎಲ್ಲದರಲ್ಲೂ ದೈವದ ನೆಲಸು ಉಂಟು. ಅದು ಹೊಕ್ಕುಬಳಕೆಯಾಗಿ ನೆಲೆನಿಂತಿದೆ. ಮಹಾಭಾರತ – ರಾಮಾಯಣಗಳು ದೈವದ ನೆಲೆಯನ್ನು ನಾನಾ ಬಗೆಗಳಲ್ಲಿ ಚಿತ್ರಿಸಿವೆ. ಆ ಮಹಾಕಾವ್ಯಗಳಲ್ಲಿ ಬರುವ ಪಾತ್ರಗಳಲ್ಲೂ ದೈವದ ನೆಲೆ–ಬೆಲೆಗಳ ಹುಡುಕಾಟ ನಡೆಸಿರುವುದುಂಟು. ಮನುಷ್ಯನ ಪ್ರಯತ್ನಕ್ಕಿಂತ ದೈವದ ನೆರವು ಹೆಚ್ಚೆಂದು ಒಂದಲ್ಲ ಒಂದು ಬಗೆಯಲ್ಲಿಯೂ ನಾನಾ ಉಪಖ್ಯಾನಗಳಲ್ಲಿಯೂ ಬಂದಿವೆ. ನಮ್ಮ ಕನ್ನಡ ಕಾವ್ಯಗಳಲ್ಲೂ ಮನುಷ್ಯನ ಚಟುವಟಿಕೆಗಳನ್ನು ಚಿತ್ರಿಸಿರುವಂತೆ, ದೈವದ ಮೇಲಾಟವನ್ನು ಸೂಕ್ಷ್ಮವಾಗಿ ಚಿತ್ರಿಸಿರುವುದುಂಟು! ನಮ್ಮ ಆದಿಕವಿ ಪಂಪ ಒಂದೆಡೆ, 'ಕುರುಪತಿಗಿಲ್ಲ ದೈವಬಲಂ' ಎಂದು ಪಾತ್ರವೊಂದರ ಮೂಲಕ ಹೇಳಿಸಿಬಿಡುತ್ತಾನೆ. ದುರ್ಯೋಧನನ ಹೆಜ್ಜೆಗುರುತುಗಳನ್ನು ಈ ಮಾತು ಧ್ವನಿಪೂರ್ವಕವಾಗಿ ಹೇಳುತ್ತದೆ.

ಪುರುಷಾಯತ್ತಕ್ಕಿಂತ ದೈವಾಯತ್ತವೇ ಮೇಲೆಂದು ಪೂರ್ವದ ಕೃತಿಗಳು ಚಿತ್ರಿಸಿದರೆ; ಪಶ್ಚಿಮದ ಕೃತಿಗಳು ಬಹ್ವಂಶವಾಗಿ ಪುರುಷಾಯತ್ತದ ಮೇಲ್ಮೆಯನ್ನು ಚಿತ್ರಿಸುತ್ತವೆ. ಕೊನೆಗೆ ಪುರುಷಾಯತ್ತ ಹಿನ್ನಡೆಯಾಗಿ ದೈವಾಯತ್ತವು ಮೇಲ್ಗಯ್ಯಾಗುತ್ತದೆ. ಆಗ ಮನುಷ್ಯನು ದುರಂತದ ಕಡೆಗೆ ಚಲಿಸುತ್ತಾನೆ! ಪಶ್ಚಿಮದ ಸಂಸ್ಕೃತಿ–ಸಾಹಿತ್ಯವು ಪುರುಷಪ್ರಯತ್ನದ ನೆಲೆಯಲ್ಲೇ ನಿಲ್ಲುವುದುಂಟು! ಪ್ರಾಚೀನ ಗ್ರೀಕ್‌ಸಾಹಿತ್ಯ, ಅನಂತರ ಬೆಳೆದ ಫ್ರೆಂಚ್ ಸಾಹಿತ್ಯ ಇವುಗಳಲ್ಲಿ 'ಮನುಷ್ಯಕೇಂದ್ರಿತ' ಸಾಹಸೋದ್ಯಮಗಳು ನಮಗೆ ಹೆದ್ದಟ್ಟಾಗಿ ಕಾಣಿಸುವುದುಂಟು. ಆದರೆ, ಪೂರ್ವದ ಸಾಹಿತ್ಯವು ಮನುಷ್ಯನ ಬಲವಂತಿಕೆಯನ್ನು ಚಿತ್ರಿಸುತ್ತಲೇ ದೈವದ ಹಾಜರಿಯನ್ನು ನಮ್ಮ ಗಮನಕ್ಕೆ ತರುತ್ತದೆ. 'ರಾಮಾದಿವತ್ ಪ್ರವರ್ತಿತವ್ಯಂ ನ ರಾವಾಣಾದಿವತ್' ಎಂದು ಸೂತ್ರಪ್ರಾಯವಾಗಿ ನಮ್ಮ ಸಾಹಿತ್ಯವು ಹೇಳಿರುವುದುಂಟು. ಇದು ಮನುಷ್ಯನ ಘನತೆಯನ್ನು ಹೇಳುತ್ತಲೇ ದೈವದ ಆಸರೆಯನ್ನು ಪರೋಕ್ಷವಾಗಿ ತಿಳಿಸುತ್ತದೆ. ಇದು ನಾಯಕ–ಪ್ರತಿನಾಯಕನ ಪ್ರಶ್ನೆಯಲ್ಲ. ನಾಯಕನ ಇತಿಮಿತಿಯನ್ನು ತಿಳಿಸುವುದೂ ಉಂಟು; ಪ್ರತಿನಾಯಕನ ಆಡಂಬರವನ್ನು ಹೇಳಿರುವುದೂ ಉಂಟು. ಆದರೆ, ಮಾನುಷಬಲಕ್ಕೆ ದೈವದ ಬಲ ಬೇಕೆಂದು ಸೂಚ್ಯವಾಗಿ ನಮ್ಮ ಸಾಹಿತ್ಯ ಓದುಗರ ಗಮನಕ್ಕೆ ತಂದು ಕೊಡುತ್ತದೆ. ಇಂಥ ಸಂದರ್ಭದಲ್ಲಿಯೇ ದುರ್ಯೋಧನ ದೈವಬಲವನ್ನು ಕಳೆದುಕೊಳ್ಳುವುದು.

ಕಾಳಿದಾಸನು ಅಭಿಜ್ಞಾನ ಶಾಕುಂತಲದ ನಾಲ್ಕನೆಯ ಅಂಕದಲ್ಲಿ, 'ದೈವಾಯತ್ತ'ದ ಮಾತನ್ನು ಮಾನುಷನೆಲೆಯಿಂದಲೇ ವಿಸ್ತರಿಸುತ್ತಾನೆ. ಶಕುಂತಲೆಯು ದುಷ್ಯಂತ ಮಹಾರಾಜನ ಬಳಿಗೆ ಹೋಗಲು ಸಿದ್ಧಳಾಗಿದ್ದಾಳೆ. ಕಣ್ವರ ಆಶ್ರಮದಲ್ಲಿರುವ ವೃದ್ಧ ಗೌತಮಿ, ಶಾಕುಂತಲೆಯ ಸಖಿಯರಾದ ಅನಸೂಯಾಪ್ರಿಯಂವದೆ, ಅಲ್ಲಿರುವ ಜಿಂಕೆ, ಮೊಲ, ವೃಕ್ಷ, ಲತೆ ಮುಂತಾದುವೆಲ್ಲಾ ಶಾಕುಂತಲೆ ಪತಿಗೃಹಕ್ಕೆ ಹೋಗುತ್ತಿರುವುದನ್ನು ಗಮನಿಸುತ್ತಿದ್ದಾರೆ. ಪ್ರತಿಯೊಬ್ಬರಲ್ಲೂ ದುಃಖ ಹೆಪ್ಪುಗಟ್ಟಿದೆ. ಚಿಕ್ಕಂದಿನಿಂದ ಬೆಳೆದು ಆಶ್ರಮವಾಸಿಯಾಗಿದ್ದ ಶಾಕುಂತಲೆ ಎಲ್ಲರನ್ನು ಬಿಟ್ಟು ಹೊರಡುತ್ತಿದ್ದಾಳೆ.

ಆಗ ಕಣ್ವರು ಶಾಕುಂತಲೆಗೆ ಕೆಲವು ಬುದ್ಧಿಯ ಮಾತುಗಳನ್ನು ಹೇಳುತ್ತಾರೆ. ಅನಂತರ ಶಿಷ್ಯ ಶಾರ್ಙ್ಗರವನಿಗೆ ನನ್ನ ಈ ಮಾತುಗಳನ್ನು ದುಷ್ಯಂತನಿಗೆ ತಿಳಿಸೆಂದು ಹೇಳುತ್ತಾರೆ. ಕಣ್ವರು ಹೇಳುವ ಮಾತುಗಳಿಷ್ಟು: 'ನಾವು ಸಂಯಮವನ್ನು ಧನವೆಂದು ಬಗೆದಿದ್ದೇವೆ. ನೀನೊ ಉನ್ನತಕುಲಕ್ಕೆ ಸೇರಿದವನು. ನೀನು ಯಾರ ನೆರವನ್ನೂ ಪಡೆಯದೆಯೆ ಶಕುಂತಲೆಯಲ್ಲಿ ಒಲುಮೆಯನ್ನು ಪಡೆದಿದ್ದೀಯೆ. ನಿನಗೆ ಹಲವು ಹೆಂಡತಿಯರಿದ್ದಾರೆ. ಅವರ ಜತೆ ಈಕೆಗೆ ಮನ್ನಣೆಕೊಟ್ಟು ನೋಡಿಕೊಳ್ಳುವುದು ಅಗತ್ಯ! ಇನ್ನು ಯೋಚಿಸುವುದೇನು ಎಲ್ಲವೂ ಭಾಗ್ಯಾಧೀನವೇ ಸರಿ'.

ಕಾಳಿದಾಸನು 'ಭಾಗ್ಯಾಯತ್ತಃ' ಎಂದು ಹೇಳುತ್ತಾನೆ. ಇಲ್ಲಿರುವ 'ಭಾಗ್ಯಾಯತ್ತ' ಎಂಬ ಮಾತು 'ದೈವಾಯತ್ತ'ದ ಧ್ವನಿಯೇ ಆಗಿದೆ! ಮುನಿಗಳಾದ ನಾವು ಲೋಕದ ನಡಾವಳಿಯಂತೆ ನಡೆಯುತ್ತಿದ್ದೇವೆ. ಇದಕ್ಕಿಂತ ಮಿಗಿಲಾದ ದೈವದ ನೆಲೆಯೂ ಒಂದುಂಟು. ಅದು ಹೇಗೆ ನಡೆಸುತ್ತದೆಯೋ ಅದಕ್ಕೆ ನಾವು ಅಧೀನರೆಂಬ ಧ್ವನಿಪೂರ್ಣ ಮಾತು ಶಾಕುಂತಲಾ ನಾಟಕದಲ್ಲಿ ಬಂದಿದೆ.

ಭಾರತೀಯ ಸಂಸ್ಕೃತಿಯು 'ದೈವಾಯತ್ತ'ದ ನೆಲೆಯನ್ನು ಅಂತಿಮವಾಗಿ ಎತ್ತಿ ಹಿಡಿಯುತ್ತದೆ. ಆದರೆ, ಈ ಮಾತು ಪುರುಷಾಯತ್ತವನ್ನು ಕುಗ್ಗಿಸುವುದಿಲ್ಲ. ಪುರುಷಾಯತ್ತವು ದೈವಾಯತ್ತದ ಜತೆಗೆ ನೆಲೆಯೂರಬೇಕು. ಇವೆರಡು ಪರಸ್ಪರ ಸಂಘರ್ಷಾತ್ಮಕ ನೆಲೆಗೆ ಕೈಯೂರಕೂಡದು ಅಷ್ಟೆ. ಗೀತೆಯು ಇದಕ್ಕಾಗಿಯೇ 'ದೈವೀಸಂಪದ್ವಿಭಾಗಯೋಗ' ಎಂಬ ಒಂದು ಅಧ್ಯಾಯವನ್ನು ಎತ್ತಿ ಹೇಳಿದೆ. ಪುರುಷಾಯತ್ತದಲ್ಲಿ ಆಸುರೀಗುಣ ಮನೆಮಾಡಿಕೊಂಡಿರುತ್ತದೆ. ಅದು ಅವನನ್ನು ನಾನಾ ರೀತಿಗಳಲ್ಲಿ ಎಡೆತಾಕಿಸುವುದುಂಟು. ಇಂಥ ಆಸುರೀಗುಣವು ದೈವೀಸಂಪತ್ತಿನ ಆಗರ ಆಗಬೇಕು. ಮನುಷ್ಯನ ಪ್ರಯತ್ನವು ದೈವೀಸಂಪತ್ತಿನ ಜತೆ ಕೂಡಿ ನಡೆದಾಗ 'ಪುರುಷಾಯತ್ತ'ಕ್ಕೆ ಬೆಲೆ ಬರುತ್ತದೆ. ಆಗ 'ದೈವಾಯತ್ತ'ದ ಹಿರಿಮೆ ತಿಳಿಯಲು ನಮಗೆ ಸಾಧ್ಯವಾಗುತ್ತದೆ. ಕುವೆಂಪು–ಬೇಂದ್ರೆ ಮುಂತಾದ ಕವಿಗಳು ಪುರುಷಾಯತ್ತದ ನೆಲೆಗಳನ್ನು ಚಿತ್ರಿಸುವಂತೆ 'ದೈವಾಯತ್ತ'ದ ಶ್ರೇಷ್ಠತೆಯನ್ನೂ ಚಿತ್ರಿಸುತ್ತಾರೆ. ಈ ದೈವಾಯತ್ತವು ನಾನಾ ರೂಪಗಳಲ್ಲಿ ಕಾಣಿಸುವುದುಂಟು. ದೈವವು ಮನುಷ್ಯನ ಕೈಹಿಡಿದು ನಡೆಸಬೇಕು. ಈ ದೈವವು ಮಾನುಷರೂಪವೂ ಆಗಬಹುದು; ಪ್ರಕೃತಿ ರೂಪವೂ ಆಗಿರಬಹುದು. ಮನುಷ್ಯನೊಳಗಿರುವ ದೈವೀಪ್ರಭೆಯು ಪುರುಷಾಯತ್ತದ ಕೈಹಿಡಿದು ನಡೆಯಲು ಇದರಿಂದ ಸಾಧ್ಯವಾಗುತ್ತದೆ. ಪರಾರ್ಥ ಪುರುಷಾಯತ್ತವು ದೈವಾಯತ್ತದ ನೆಮ್ಮುಗೆಯನ್ನು ಅವಲಂಬಿಸುವುದು ಇದೇ ಕಾರಣದಿಂದಾಗಿಯೇ. ಅಂತಿಮವಾಗಿ ಹೇಳುವುದಾದರೆ, ಪುರುಷಾಯತ್ತವು ದೈವಾಯತ್ತದ ಕೈಹಿಡಿದು ನಡೆಯಬೇಕಾಗಿದೆ.

■ ಪುರಂಜೀವಿ

## ಮಾತೇ ಮುತ್ತು

- ವರ್ತಮಾನಕ್ಕಾಗಿ ಜೀವಿಸುತ್ತಾ, ಭವಿಷ್ಯತ್ತಿಗೆ ಸಿದ್ಧತೆ ಮಾಡಿಕೊಳ್ಳದೆ ಇದ್ದರೆ ಪಶ್ಚಾತ್ತಾಪ ತಪ್ಪದು.

  –ಮಹಾವೀರ

- ಅನುಭವವು ಜಗತ್ತಿನ ಸರ್ವಶ್ರೇಷ್ಠ ಶಿಕ್ಷಕ. ಉಸಿರಿರುವವರೆಗೂ ಕಲಿಕೆ, ಜ್ಞಾನಾರ್ಜನೆಯೇ ಜೀವನದ ಗುರಿಯಾಗಿರಲಿ.

  –ಸ್ವಾಮಿ ವಿವೇಕಾನಂದ

- ತಿಳಿದವಗೆ ಜಗವೆಲ್ಲ ರಸದ ಊಟ.

  –ಜಿ.ಎಸ್. ಶಿವರುದ್ರಪ್ಪ

- ನಮ್ಮ ಬದುಕಿನಲ್ಲಿ ಕನ್ನಡಿ ಮತ್ತು ನೆರಳಿನಂತಹ ಸ್ನೇಹಿತರು ಸಿಗಬೇಕು. ಕನ್ನಡಿ ಸುಳ್ಳು ಹೇಳುವುದಿಲ್ಲ ಮತ್ತು ನೆರಳು ಎಂತಹ ಸಂದರ್ಭದಲ್ಲೂ ಬಿಟ್ಟು ಹೋಗುವುದಿಲ್ಲ.

  –ಲತಾ ಮಂಗೇಶ್ಕರ್

- ಆರೋಗ್ಯ ಇದ್ದವನಿಗೆ ಭರವಸೆ ಇರುತ್ತದೆ. ಭರವಸೆ ಇದ್ದವನ ಬಳಿ ಎಲ್ಲವೂ ಇರುತ್ತವೆ.

  –ಥಾಮಸ್ ಕಾರ್ಲೈಲ್

- ನಿಜವಾದ ಸೋಲು ಪ್ರತಿಸ್ಪರ್ಧಿಗಳಿಂದ ಸಂಭವಿಸುವ ಪರಾಜಯವಲ್ಲ. ನಮ್ಮಲ್ಲಿ, ನಮ್ಮ ಸಾಹಸದಲ್ಲಿ, ನಮ್ಮ ಶ್ರದ್ಧೆಯಲ್ಲಿ ನಮಗೆ ನಂಬಿಕೆ ಹೋಗುವುದು.

  –ತ.ರಾ.ಸು